ಬೆವಿಕಂ

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

BESCOM

ಕ್ರಮಾಂಕ: ಬೆವಿಕಂ/ಬಿಸಿ31/64/2017-18/30

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು – 560001,
ದಿನಾಂಕ: 24 APR 2017

## ಸುತ್ತೋಲೆ

ವಿಷಯ: ವಿದ್ಯುತ್ ಅಪಘಾತವನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ.

ಉಲ್ಲೇಖ: ರಿಜಿಸ್ಟ್ರಾರ್, ಮಾನ್ಯ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ರವರ ಪತ್ರ ಸಂಖ್ಯೆ: 1399/10/32/2017-(ಬಿ3) ದಿನಾಂಕ: 21.03.2017

****

ದಿನಾಂಕ: 07.03.2017 ರಂದು **"The Times of India"** ದಿನಪತ್ರಿಕೆಯಲ್ಲಿ ದೇವನಹಳ್ಳಿ ತಾಲ್ಲೂಕಿನ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಶಾಲೆಯ ಆವರಣದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಗಳನ್ನು ತುಳಿದು ಮಾರಣಾಂತಿಕವಲ್ಲದ ವಿದ್ಯುತ್ ಅಪಘಾತಕ್ಕೀಡಾದ ಘಟನೆ ಪ್ರಕಟಗೊಂಡಿದ್ದು, ಸದರಿ ವರದಿಯನ್ನಾಧರಿಸಿ ಮಾನ್ಯ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಪ್ರಕರಣ ದಾಖಲಿಸಿಕೊಂಡು, ಪ್ರಕರಣದ ಬಗ್ಗೆ ಬೆವಿಕಂ ಆರು ವಾರಗಳ ಒಳಗಾಗಿ ವರದಿ ನೀಡುವಂತೆ ಆದೇಶಿಸಿರುತ್ತದೆ.

ಕಂಪನಿ ವ್ಯಾಪ್ತಿಯಲ್ಲಿ ಅಪಾಯಕರ ಸ್ಥಳಗಳನ್ನು (Hazardarous Location) ಗುರುತಿಸಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಆದ್ಯತೆ ಮೇರೆಗೆ ಕೈಗೊಳ್ಳುವುದು ಸಂಬಂಧಿಸಿದ ಅಧಿಕಾರಿಗಳ ಪ್ರಮುಖ ಜವಾಬ್ದಾರಿಯಾಗುತ್ತದೆ. ಆದಾಗ್ಯೂ ಕೆಲವು ಅಧಿಕಾರಿಗಳ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನದಿಂದ ಮೇಲೆ ತಿಳಿಸಿರುವಂತಹ ವಿದ್ಯುತ್ ಅಪಘಾತಗಳು ಮರುಕಳಿಸುತ್ತಿರುವುದು ವಿಷಾಧನೀಯ ಸಂಗತಿಯಾಗಿರುತ್ತದೆ.

ಈ ಸಂಬಂಧ, ಎಲ್ಲಾ ಉಪ ವಿಭಾಗದ ಅಧಿಕಾರಿಗಳು ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಅಪಾಯಕರ ಸ್ಥಳಗಳನ್ನು (Hazardarous Location) ಗುರುತಿಸಿ ಕೂಡಲೇ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಈ ಸುತ್ತೋಲೆ ಮೂಲಕ ಮತ್ತೊಮ್ಮೆ ನಿರ್ದೇಶನ ನೀಡಲಾಗುತ್ತಿದೆ ಹಾಗೂ ಕೈಗೊಂಡ ಕ್ರಮದ ಬಗ್ಗೆ 30 ದಿನದೊಳಗಾಗಿ ಸಂಕ್ಷಿಪ್ತ ವರದಿಯನ್ನು ಪ್ರಧಾನ ವ್ಯವಸ್ಥಾಪಕರು(ಗುಣ ಮತ್ತು ಸುರಕ್ಷತೆ), ಕಂಪನಿ ಕಾರ್ಯಾಲಯ ರವರಿಗೆ ಕಳುಹಿಸತಕ್ಕದ್ದು. ಪ್ರಧಾನ ವ್ಯವಸ್ಥಾಪಕರು(ಗುಣ ಮತ್ತು ಸುರಕ್ಷತೆ) ರವರು ಸದರಿ ವರದಿಗಳನ್ನು ಕ್ರೋಢೀಕರಿಸಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅವಗಾಹನೆಗೆ ಮಂಡಿಸತಕ್ಕದ್ದು.

ಈ ಸುತ್ತೋಲೆ ನಿರ್ದೇಶನವನ್ನು ಪಾಲಿಸಲು ಉಪ ವಿಭಾಗದ ಅಧಿಕಾರಿಗಳು ವಿಫಲರಾದಲ್ಲಿ, ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

**ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ**

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಅಧಿಕ ಪ್ರಭಾರ
ಬೆ.ವಿ.ಕಂ., ಬೆಂಗಳೂರು

**ಪ್ರತಿಗಳು:-**

1. ಕಂಪನಿ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
4. ಎಲ್ಲಾ ಅಧಿಕಾರಿಗಳು, ಕಂಪನಿ ಕಾರ್ಯಾಲಯ, ಬೆ.ವಿ.ಕಂ., ಬೆಂಗಳೂರು.
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯ, ಬೆವಿಕಂ.
6. ಎಲ್ಲಾ ಲೆಕ್ಕನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವಲಯ, ಬೆವಿಕಂ.
7. ಅಧೀಕ್ಷಕ ಇಂಜಿನಿಯರ್(ವಿ)(ಕಂಪ್ಯೂಟರ್ ಸೆಂಟರ್), ಕವಿಪ್ರನಿನಿ, ಬೆಂಗಳೂರು.
8. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ. ಮತ್ತು ಪಾ., ಬೆವಿಕಂ.
9. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕಾ. ಮತ್ತು ಪಾ., ಬೆವಿಕಂ.
10. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂ.
11. ಎಲ್ಲಾ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ/(ಆಂ.ಪ), ಬೆವಿಕಂ.
12. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಬೆವಿಕಂ.
13. ಆಪ್ತ ಕಾರ್ಯದರ್ಶಿಗಳು: ವ್ಯ.ನಿ/ನಿ(ತಾಂ.)/ನಿ(ಹ), ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
14. ಮುಖ್ಯ ಕಡತ

**ಪ್ರತಿಗಳು ಮಾಹಿತಿಗಾಗಿ:-**

1. ಶ್ರೀ ಎಂ. ನಾಗರಾಜ್, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ, ಆನಂದರಾವ್ ವೃತ್ತ, ಬೆಂಗಳೂರು.
2. ಶ್ರೀ ಎ. ಎನ್. ಜಯರಾಜ್, ಅಧ್ಯಕ್ಷರು, ಕೆಇಬಿ, ಇಂಜಿನಿಯರುಗಳ ಸಂಘ, ಆನಂದರಾವ್ ವೃತ್ತ, ಬೆಂಗಳೂರು.
3. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ. ನೌಕರರ ಸಂಘ/ಕ.ವಿ.ಮಂ ಇಂಜಿನಿಯರುಗಳ ಸಂಘ/ಡಿಪ್ಲೊಮಾ ಇಂಜಿನಿಯರುಗಳ ಸಂಘ/ಕ.ವಿ.ಪ್ರ.ನಿ.ನಿ., ಲೆಕ್ಕಾಧಿಕಾರಿಗಳ ಸಂಘ/ಕ.ವಿ.ಪ್ರ.ನಿ.ನಿ., ಪ.ಜಾತಿ ಮತ್ತು ಪ.ಪಂಗಡಗಳ ಕಲ್ಯಾಣ ಸಂಸ್ಥೆ/ಕವಿಪ್ರನಿನಿ/ಎಸ್ಕಾಂ, ಪ.ಜಾತಿ ಮತ್ತು ಪ.ಪಂಗಡಗಳ ಅಧಿಕಾರಿಗಳ ಸಂಘ, ಬೆಂಗಳೂರು ರವರುಗಳ ಮಾಹಿತಿಗಾಗಿ.